**ಓ.ಎಸ್. ನಂಃ 22/2020**

**ಪಿ.ಡಬ್ಲ್ಯೂಃ 1**

**ದಿನಾಂಕ 30.07.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ: ಶ್ರೀಮತಿ ಡಿ.ಎಸ್.ಎಮ್. .ವಕೀಲರಿಂದಃ**

19. ನಿಪಿ.5 ರ ದಾಖಲೆಯ ದಿನಾಂಕ ನನಗೆ ನೆನಪಿಲ್ಲ ಆದರೆ ನಿಪಿ.5 ರ ದಾಖಲೆಯನ್ನು ನನ್ನ ತಂದೆಯವರು ನನಗೆ 2012 ರಲ್ಲಿ ಬರೆದುಕೊಟ್ಟಿರುತ್ತಾರೆ. ನಿಪಿ.5 ರ ದಾಖಲೆಯನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುವುದನ್ನು ಬಿಟ್ಟರೆ ಬೇರೆ ಯಾವ ನ್ಯಾಯಾಲಯದಲ್ಲಿ ಮತ್ತು ಬೇರೆ ಯಾವುದೇ ಪ್ರಾಧಿಕಾರದ ಮುಂದೆ ನಾನು ನಿಪಿ.5 ರ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಮನೆಯಲ್ಲಿ ವಾದಿಗೆ ಅರ್ಧ ಭಾಗವನ್ನು ನಾನು ಕೊಟ್ಟಿದ್ದು, ಮನೆಯ ಇನ್ನರ್ಧ ಭಾಗವನ್ನು ನಾನು ನಿನಗೆ ಕೊಡುತ್ತೇನೆ ಎಂದು ಹೇಳಿ ನಿಪಿ.5 ರ ದಾಖಲೆಯನ್ನು ನನ್ನ ತಂದೆಯವರು ನನಗೆ ಬರೆದುಕೊಟ್ಟಿರುತ್ತಾರೆ. ನಿಪಿ.5 ರ ದಾಖಲೆಯನ್ನು ಶ್ರೀನಿವಾಸ ಎನ್ನುವವರು ಉಪನೊಂದಾಣಾಧಿಕರಿಯವರ ಕಚೇರಿಯಲ್ಲಿ ಬರೆದಿರುತ್ತಾರೆ. ನಿಪಿ.5 ರ ದಾಖಲೆಯನ್ನು ಶ್ರೀನಿವಾಸ ಎನ್ನುವವರು ಬರೆದಿರುತ್ತಾರೆ ಎಂದು ನಿಪಿ.5 ರ ದಾಖಲೆಯಲ್ಲಿ ನಮೂದಾಗಿರುತ್ತದೆಯೋ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಶ್ರೀನಿವಾಸ್ ರವರು ತಾವೇ ನಿಪಿ.5 ರ ದಾಖಲೆಯನ್ನು ಬರೆದಿರುವುದಾಗಿ ನ್ಯಾಯಾಲಯದಲ್ಲಿ ಬಂದು ಸಾಕ್ಷಿ ನುಡಿಯುತ್ತೇನೆ ಎಂದು ನನ್ನಲ್ಲಿ ಹೇಳಿರುತ್ತಾರೆ ಅಂತ ಸಾಕ್ಷಿದಾರರು ಉತ್ತರಿಸಿರುತ್ತಾರೆ.

20. ಈ ದಾವೆಯನ್ನು ಹೂಡುವ ಪೂರ್ವದಲ್ಲಿ 1 ನೇ ಪ್ರತಿವಾದಿಯು ಶಾಶ್ವತ ನಿರ್ಭಂದಕಾಜ್ಞೆಯನ್ನು ಕೋರಿ ಅಸಲು ದಾವೆ ಸಂಖ್ಯೆ 465/2012 ರ ದಾವೆಯನ್ನು ಹೂಡಿದ್ದರು ಎಂದರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆಯವರು 1 ನೇ ಪ್ರತಿವಾದಿಗೆ ಬರೆದಕೊಟ್ಟಿದ್ದ ನಿಡಿ.12 ರ ದಾನ ಪತ್ರವನ್ನು 1 ನೇ ಪ್ರತಿವಾದಿ ಈ ದಾವೆಯಲ್ಲಿ ಹಾಜರುಪಡಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ

ತಂದೆಗೆ ವೃದ್ಧಾಪ್ಯ ಪಿಂಚಣಿ ಮಾಡಿಸಿಕೊಡುವುದಾಗಿ ನಂಬಿಸಿ ತಂದೆಯನ್ನು ಉಪನೊಂದಾಣಾಧಿಕರಿಯವರ ಕಚೇರಿಗೆ 1 ನೇ ಪ್ರತಿವಾದಿ ಕರೆದುಕೊಂಡು ಹೋಗಿ ಸದರಿ ದಾನಪತ್ರವನ್ನು ಮೋಸದಿಂದ ತಮ್ಮ ಹೆಸರಿಗೆ ಬರೆಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

21. ನಿಡಿ.12 ರ ದಾನಪತ್ರವನ್ನು 1 ನೇ ಪ್ರತಿವಾದಿಗೆ ನನ್ನ ತಂದೆ 2012 ರ ಡಿಸೆಂಬರ್ ತಿಂಗಳಿನಲ್ಲಿ ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಿಡಿ.12 ರ ದಾಖಲೆಯನ್ನು ಬರೆದ ಒಂದು ವಾರದ ನಂತರ ನಿಪಿ.5 ರ ದಾಖಲೆಯನ್ನು ನನ್ನ ತಂದೆ ನನಗೆ ಬರೆದುಕೊಟ್ಟಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ನಿಪಿ.5 ರ ದಾಖಲೆಯನ್ನು ನಾನು ಅಸಲು ದಾವೆ ಸಂಖ್ಯೆ 465/2012 ರಲ್ಲಿ ಹಾಜರುಪಡಿಸಿರುತ್ತೇನೆ. ನಿಪಿ.5 ರ ದಾಖಲೆಯ ಅಧಾರದ ಮೇಲೆ ನಾನು ನನಗೆ ಮನೆಯಲ್ಲಿ ನೀಡಿದ ಅರ್ಧ ಭಾಗವನ್ನು ನನ್ನ ಹೆಸರಿಗೆ ಖಾತೆ ವರ್ಗಾವಣೆಯನ್ನು ಮಾಡಿಸಿಕೊಂಡಿರುವುದಿಲ್ಲ. ಇಲ್ಲಿಯವರೆಗೂ ದಾವಾ ಆಸ್ತಿಯ ಖಾತೆಯು ನನ್ನ ತಂದೆಯ ಹೆಸರಿನಲ್ಲಿಯೇ ಇದೆ ಎಂದರೆ ಸರಿ.

22. ನಿಪಿ.5 ರ ದಾಖಲೆಗೆ ನನ್ನ ತಂದೆಯವರು ಸಹಿ ಮಾಡಿದ್ದು, ಅದಕ್ಕೆ ಸಾಕ್ಷಿದಾರರಾಗಿ ನನ್ನ ತಮ್ಮನಾದ ಶಿವ ಮತ್ತು ನನ್ನ ಅತ್ತೆಯ ಮಗನಾದ ದೇವಯ್ಯರವರು ತಮ್ಮ ಸಹಿಗಳನ್ನು ಮಾಡಿರುತ್ತಾರೆ. ನಿಪಿ.5 ರ ದಾಖಲೆಯಲ್ಲಿ ಸಾಕ್ಷಿದಾರರಾದ ಶಿವ ಮತ್ತು ದೇವಯ್ಯರವರ ತಂದೆಯ ಹೆಸರು ಹಾಗೂ ವಿಳಾಸ ಇಲ್ಲ ಎಂದರೆ ಸರಿ. ಈ ದಾವೆಯಲ್ಲಿ ನನ್ನ ಪಾಟೀ ಸವಾಲು ಮುಗಿದ ನಂತರದಲ್ಲಿ ನಿಪಿ.5 ರ ದಾಖಲೆಯನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.5 ರ ದಾಖಲೆಯನ್ನು ನಾನು ಹಿಂದಿನ ಅಸಲು ದಾವೆ ಸಂಖ್ಯೆ 465/2012 ರಲ್ಲಾಗಲೀ ಅಥವಾ ಬೇರೆ ಯಾವುದೇ ಸಕ್ಷಮ ಪ್ರಾಧಿಕಾರದ ಮುಂದಾಗಲೀ ಹಾಜರುಪಡಿಸಿರುವುದಿಲ್ಲ ಮತ್ತು ನಿಪಿ.5 ರ ದಾಖಲೆಯ ಪ್ರಕಾರ ನಾನು ಇಲ್ಲಿಯವರಗೂ ನನ್ನ ಹೆಸರಿಗೆ ಖಾತೆ ವರ್ಗಾವಣೆಯನ್ನು ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ನಿಪಿ.5 ರ ದಾಖಲೆಯನ್ನು ಸುಳ್ಳಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

23. ನಿಪಿ.5 ರ ದಾಖಲೆಯು ನನ್ನ ಬಳಿಯಲ್ಲಿಯೇ ಇತ್ತು. ಈ ದಾವೆಯನ್ನು ಹೂಡುವಾಗ ನಿಪಿ.5 ರ ದಾಖಲೆಯನ್ನು ನನ್ನ ವಕೀಲರಿಗೆ ಕೊಟ್ಟಿದ್ದೆ. ನಿಪಿ.5 ರ ದಾಖಲೆಯನ್ನು ನಾನೇ ಸುಳ್ಳಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**